ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ (ಪಿಆರ್.ಡಿ) ಪ್ರಿಸಂ ಯೋಜನೆಯ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

ಕಾಸರಗೋಡು: ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ (ಪಿಆರ್‌ಡಿ) ಪ್ರಿಸಂ (ಸಂಯೋಜಿತ ಅಭಿವೃದ್ಧಿ ವಾರ್ತಾ ಶೃಂಖಲೆ) ಯೋಜನೆಯ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಉಪಸಂಪಾದಕ, ಮಾಹಿತಿ ಸಹಾಯಕ, ಕಂಟೆಂಟ್ ಎಡಿಟರ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಈ ಹುದ್ದೆಗಳ ಪಾನೆಲ್ ರಚಿಸಲಾಗುವುದು. ಲಿಖಿತ ಪರೀಕ್ಷೆ ಮತ್ತು ಸಂದರ್ಶನ ತಳಹದಿಯಲ್ಲಿ ಪಾನೆಲ್ ರಚನೆಗೊಳ್ಳಲಿದೆ. ಉದ್ಯೋಗಾರ್ಥಿಗಳು ಸಿಡಿಟ್‌ನ ರಿಕ್ರೂಟ್‌ಮೆಂಟ್ ಪೋರ್ಟಲ್ www.careers.cdit.orgನ ನೋಟಿಫಿಕೇಷನ್ ಲಿಂಕ್‌ನಲ್ಲಿ ಕ್ಲಿಕ್ ನಡೆಸಿ ಅ.17ರ ಮುಂಚಿತವಾಗಿ ಅರ್ಜಿ ಸಲ್ಲಿಸಬೇಕು. ಬಯೋಡಾಟಾ, ಅರ್ಹತಾ ಪತ್ರಗಳು, ಫೋಟೋ ಸಹಿತ ಸೈಟ್‌ನಲ್ಲಿ ಮಾಹಿತಿಗಳನ್ನು ಅಪ್‌ಲೋಡ್ ನಡೆಸಬೇಕು. ಒಮ್ಮೆ ಅಪ್‌ಲೋಡ್ ನಡೆಸಿದ ನಂತರ ಬದಲಾವಣೆ ಮಾಡುವಂತಿಲ್ಲ.

ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಯಾ ಯಾವುದೇ ವಿಷಯದಲ್ಲಿ ಪದವಿ, ಪತ್ರಿಕೋದ್ಯಮ/ಪಿ.ಆರ್./ಮಾಸ್ ಕಮ್ಯೂನಿಕೇಶನ್ ಡಿಪ್ಲೋಮಾ ಯಾ ಪತ್ರಿಕೋದ್ಯಮ/ಸಾರ್ವಜನಿಕ ಸಂಪರ್ಕ/ಮಾಸ್ ಕಮ್ಯೂನಿಕೇಶನ್‌ನಲ್ಲಿ ಅಂಗೀಕೃತ ಪದವಿ ಹೊಂದಿದವರು ಉಪಸಂಪಾದಕ ಹುದ್ದೆಗೆ ಅರ್ಜಿ ಸಲ್ಲಿಸಬಹುದು. ವಾರ್ತಾ ಏಜೆನ್ಸಿಗಳಲ್ಲಿ ಸರಕಾರಿ/ಅರೆ ಸರಕಾರಿ ಸಂಸ್ಥೆಗಳಲ್ಲಿ ಪಿ.ಆರ್. ವಾರ್ತಾ ವಿಭಾಗಗಳಲ್ಲಿ 2 ವರ್ಷಗಳ ವೃತ್ತಿ ಅನುಭವ ಹೊಂದಿರಬೇಕು.

ಯಾವುದೇ ವಿಷಯದಲ್ಲಿ ಪದವಿ, ಪತ್ರಿಕೋದ್ಯಮ/ಪಿ.ಆರ್/ಮಾಸ್ ಕಮ್ಯೂನಿಕೇಶನ್ ಡಿಪ್ಲೋಮಾ ಯಾ ಪತ್ರಿಕೋದ್ಯಮ/ಸಾರ್ವಜನಿಕ ಸಂಪರ್ಕ/ಮಾಸ್ ಕಮ್ಯೂನಿಕೇಶನ್‌ನಲ್ಲಿ ಅಂಗೀಕೃತ ಪದವಿಯ ಕಂಟೆಂಟ್ ಎಡಿಟರ್ ಮತ್ತು ಮಾಹಿತಿ ಸಹಾಯಕ ಹುದ್ದೆಗೆ ಅರ್ಹತೆಯಾಗಿದೆ. ಪತ್ರಿಕೆ, ಸುದ್ದಿವಾಹಿನಿ, ವಾರ್ತಾ ಏಜೆನ್ಸಿಗಳಲ್ಲಿ, ಆನ್‌ಲೈನ್ ಮಾಧ್ಯಮಗಳಲ್ಲಿ ಸರಕಾರಿ/ಅರೆ ಸರಕಾರಿ ಸಂಸ್ಥೆಗಳಲ್ಲಿ ಪಿ.ಆರ್. ವಾರ್ತಾ ವಿಭಾಗಗಳಲ್ಲಿ ಯಾ ಸಾಮಾಜಿಕ ಜಾಲತಾಣ ಮಾಧ್ಯಮಗಳಲ್ಲಿ 2 ವರ್ಷಗಳ ವೃತ್ತಿ ಅನುಭವಹೊಂದಿರಬೇಕು. ಡಿಸೈನಿಂಗ್ ಪರಿಣತಿ ಹೊಂದಿರುವವರಿಗೆ ಆದ್ಯತೆಯಿದೆ.

3 ಪ್ಯಾನೆಲ್‌ನಲ್ಲೂ ಮಲೆಯಾಳಂ ಟೈಪಿಂಗ್ ತಿಳಿದವರಾಗಿರಬೇಕು. ಉಪಸಂಪಾದಕ, ಮಾಹಿತಿ ಸಹಾಯಕ, ಪಾನೆಲ್‌ಗಳಿಗೆ ಅರ್ಜಿ ಸಲ್ಲಿಸುವವರು ಕಂಟೆಂಟ್ ಎಡಿಟರ್ ಹುದ್ದೆಯ ಅರ್ಹತೆಯಿದ್ದಲ್ಲಿ ಅದಕ್ಕೂ ಅರ್ಜಿ ಸಲ್ಲಿಸಬಹುದು. ಆದರೆ ಉಪಸಂಪಾದಕ, ಮಾಹಿತಿ ಸಹಾಯಕ ಪಾನೆಲ್‌ಗಳಲ್ಲಿ ಒಂದರಲ್ಲಿ ಮಾತ್ರ ಅರ್ಜಿ ಸಲ್ಲಿಸಬಹುದು.

ಕಂಟೆಂಟ್ ಎಡಿಟರ್ ಪರೀಕ್ಷೆ ಆನ್‌ಲೈನ್‌ನಲ್ಲಿ ಮಾತ್ರ ನಡೆಸಲಾಗುವುದು. ಇತರ 2 ಪಾನೆಲ್‌ಗಳ ಪರೀಕ್ಷೆಗಳನ್ನು ಜಿಲ್ಲಾ ಮಟ್ಟದಲ್ಲಿ ನಡೆಸಲಾಗುವುದು. ಅ. 26ರಂದು ಲಿಖಿತ ಪರೀಕ್ಷೆ ಇರುವುದು. ಒಂದು ಜಿಲ್ಲೆಯಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕು. 35 ವರ್ಷ ವಯೋಮಿತಿಯಾಗಿರುವುದು. ಆಯ್ಕೆಯಾದವರಲ್ಲಿ ಉಪಸಂಪಾದಕ ಹುದ್ದೆಗೆ 21,780 ರೂ. ಪ್ರತಿತಿಂಗಳ ಪ್ರತಿಫಲವಾಗಿರುವುದು. ಕಂಟೆಂಟ್ ಎಡಿಟರ್ ಹುದ್ದೆಗೆ 17,940 ರೂ.. ಮಾಹಿತಿ ಸಹಾಯಕ ಹುದ್ದೆಗೆ 16,940 ರೂ. ಪ್ರತಿತಿಂಗಳ ಪ್ರತಿಫಲ ಲಭಿಸಲಿದೆ. ಹೆಚ್ಚಿನ ಮಾಹಿತಿಗೆ www.prd.kerala.gov.in ಪರಿಶೀಲಿಸಬಹುದು.

ಕೇರಳ ಸರಕಾರದ ಈ ವರ್ಷದ ಕೇರಳ ಪೂರಕ್ಕಳಿ ಅಕಾಡೆಮಿ ಪುರಸ್ಕಾರ ಪುರಸ್ಕೃತ ಜಯನ್ ಪಾಲಕ್ಕಾಲ್ ಅವರನ್ನು ಮಾವುಂಗಾಲ್ ಶ್ರೀ ವಿಷ್ಣುಮಂಗಲ ಕ್ಷೇತ್ರ ಸಮಿತಿ ಗೌರವಿಸಿತು. ಸಮಿತಿ ಅಧ್ಯಕ್ಷ ಟಿ.ಕೆ. ಸುಧಾಕರನ್ ಶಾಲು ಹೊದಿಸಿ ಅಭಿನಂದಿಸಿದರು. ದಾಮೋದರನ್ ಅಧ್ಯಕ್ಷತೆ ವಹಿಸಿದರು. ಕ್ಷೇತ್ರ ಟ್ರಸ್ಟಿ ರಾಜನ್ ವಿಷ್ಣುಮಂಗಲ, ಮಾತೃ ಸಮಿತಿ ಅಧ್ಯಕ್ಷೆ ನಾರಾಯಣಿ ಕುಟ್ಟಿ, ಎ.ಟಿ. ಶಶಿ, ಬಾಲಕೃಷ್ಣನ್ ವೆಳ್ಳಿಕ್ಕೋತ್, ಪದ್ಮನಾಭನ್ ವಿಷ್ಣುಮಂಗಲಂ ಮೊದಲಾದವರು ಉಪಸ್ಥಿತರಿದ್ದರು.

ಜಿಲ್ಲೆಯ ಕ್ರೀಡಾ ವಲಯದ ಅಭಿವೃದ್ಧಿಗೆ ಪ್ರೋಜೆಕ್ಟ್ ಬಿಡುಗಡೆ

ಕಾಸರಗೋಡು: ಜಿಲ್ಲಾ ಒಲಿಂಪಿಕ್ಸ್ ಅಸೋಸಿಯೇಶನ್ ಸಿದ್ಧಪಡಿಸಿದ 'ಆನ್ ಯುವರ್ ಮಾರ್ಕ್' ಸಮಗ್ರ ಕ್ರೀಡಾ ಅಭಿವೃದ್ಧಿ ಪ್ರೊಜೆಕ್ಟ್ ಬಿಡುಗಡೆ ನಡೆದಿದೆ.

ಕೇರಳ ಒಲಿಂಪಿಕ್ಸ್ ಅಸೋಸಿಯೇಶನ್ ಅಧ್ಯಕ್ಷ ವಿ. ಸುನಿಲ್ ಕುಮಾರ್ ಅವರು ಕಾಞಂಗಾಡ್ ನಗರಸಭಾ ಅಧ್ಯಕ್ಷ ಕೆ.ವಿ. ಸುಜಾತರಿಗೆ ನೀಡಿ ಬಿಡುಗಡೆಗೊಳಿಸಿದ್ದಾರೆ. ಒಲಿಂಪಿಕ್ಸ್ ಅಸೋಸಿಯೇಶನ್ ಜಿಲ್ಲಾ ಅಧ್ಯಕ್ಷ ವಿ. ಬಾಲನ್ ಅಧ್ಯಕ್ಷತೆ ವಹಿಸಿದರು.

ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ವಿವಿಧ ನಿರ್ಮಾಣ ಚಟುವಟಿಕೆಗಳು, ಸ್ಟೇಡಿಯಂ ನಿರ್ಮಾಣಕ್ಕಾಗಿ 64 ಕೋಟಿ ರೂ., ಇಂಡೋರ್ ಸ್ಟೇಡಿಯಂ ನಿರ್ಮಾಣಕ್ಕಾಗಿ 72 ಕೋಟಿ ರೂ, ತರಬೇತಿ ಮೈದಾನಕ್ಕಾಗಿ 119 ಕೋಟಿ, ಸ್ಪೋರ್ಟ್ಸ್ ಅಕಾಡೆಮಿ ಹಾಸ್ಟೆಲ್‌ಗೆ 63 ಕೋಟಿ ರೂ. ತರಬೇತಿ, ವಿವಿಧ ಉಪಕರಣಗಳ ಖರೀದಿಗೆ 10 ಕೋಟಿ, ಇತರ ಚಟುವಟಿಕೆಗಾಗಿ 29 ಕೋಟಿ ರೂ. ಎಂದು ಅಂದಾಜಿಸಲಾಗಿದೆ.

ಮಕ್ಕಳನ್ನು ಸಣ್ಣ ಪ್ರಾಯದಲ್ಲಿಯೇ ಕ್ರೀಡಾ ವಲಯಕ್ಕೆ ಆಕರ್ಷಿಸುವ ಯೋಜನೆ ಬೇಕಾಗಿದೆ. ಜಿಲ್ಲೆಯಲ್ಲಿ ಕ್ರೀಡಾ ತಜ್ಞರ ಸಮಿತಿ ರೂಪೀಕರಿಸಬೇಕು. ಎಲ್ಲಾ ಪಂಚಾಯತ್, ನಗರಸಭಾ ವ್ಯಾಪ್ತಿಯಲ್ಲಿ ಈಜುಕೊಳ, ಕ್ರೀಡಾ ವಲಯದಲ್ಲಿ ಮಕ್ಕಳಿಗೆ ಶಿಕ್ಷಣಕ್ಕೆ ಅವಕಾಶ, ಅರ್ಹ ತರಬೇತಿದಾರರ ಸೇವೆ ಲಭ್ಯತೆ, ಕ್ರೀಡಾ ಸಹಕಾರಿ ಸಂಘ ರೂಪೀಕರಣ ಎಂಬಿವು ಪ್ರೊಜೆಕ್ಟ್‌ನಲ್ಲಿ ಸೇರಿದ ಮುಖ್ಯ ವಿಷಯಗಳಾಗಿವೆ.

ಜಿಲ್ಲೆಯ ಕ್ರೀಡಾವಲಯದ ಸಮಗ್ರ ಅಭಿವೃಧ್ಧಿಗಾಗಿ 358.14 ಕೋಟಿ ರೂ.ಗಳ ಪ್ರೊಜೆಕ್ಟ್ ಸಿದ್ಧಪಡಿಸಲಾಗಿದೆ. ಕ್ರೀಡಾ ವಲಯಕ್ಕೆ ನೂತನ ತಂತ್ರಜ್ಞಾನದ ಸದ್ಬಳಕೆ ಬಗ್ಗೆಯೂ ಚಿಂತನೆ ನಡೆಸಬೇಕಾಗಿದೆ.

ಪ್ರೊಜೆಕ್ಟ್ ಬಿಡುಗಡೆ ಕಾರ್ಯಕ್ರಮ ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್ ವಿಭಾಗಾಧಿಕಾರಿ ಇ.ಪಿ. ರಾಜ್ ಮೋಹನ್, ಪಡನ್ನಕ್ಕಾಡ್ ನೆಹರೂ ಎಜುಕೇಶನ್ ಸೊಸೈಟಿ ಕಾರ್ಯದರ್ಶಿ ಕೆ. ರಾಮನಾಥ್, ಕಾಞಂಗಾಡ್... ಫಾರಂ ಕಾರ್ಯದರ್ಶಿ ಜೋಯ್ ಮಾರೂಲ್, ಸಹಿತ ಹಲವರು ಭಾಗವಹಿಸಿದರು.

ಏಮ್ಸ್‌ಗಾಗಿ ಚೌಕಿಯಲ್ಲಿ ಪಂಜಿನ ಮೆರವಣಿಗೆ

ಮೊಗ್ರಾಲ್ ಪುತ್ತೂರು: ಏಮ್ಸ್ ಸ್ಥಾಪಿಸಲು ಜಿಲ್ಲೆಯನ್ನು ಪರಿಗಣಿಸದಿರುವುದನ್ನು ಪ್ರತಿಭಟಿಸಿ ಮೊಗ್ರಾಲ್ ಪುತ್ತೂರು ಪಂಚಾಯತ್ ಏಮ್ಸ್ ಜನಪರ ಒಕ್ಕೂಟದ ನೇತೃತ್ವದಲ್ಲಿ ಚೌಕಿಯಲ್ಲಿ ಪಂಜಿನ ಮೆರವಣಿಗೆ ನಡೆಸಲಾಯಿತು. ಕೇಂದ್ರಕ್ಕೆ ರಾಜ್ಯ ಸರಕಾರ ಪ್ರೊಪೋಸಲ್ ಸಲ್ಲಿಸುವಾಗ ಹಿಂದುಳಿದ ಜಿಲ್ಲೆಯಾದ ಕಾಸರಗೋಡಿನ ಹೆಸರು ಸೇರಿಸಬೇಕೆಂದು ನಿರಂತರ ಒತ್ತಾಯಿಸಲಾಗಿತ್ತು. ಆದರೆ ಸರಕಾರ ಮೌನ ವಹಿಸಿದೆಯೆಂದು ಆರೋಪಿಸಿ ಮೆರವಣಿಗೆ ನಡೆಸಲಾಗಿದೆ.

ಕೋವಿಡ್: ರಾಜ್ಯದ ಕೃಷಿ ವಲಯದಲ್ಲಿ 1771.05 ಕೋಟಿ ರೂ.ಗಳ ನಷ್ಟ

ತಿರುವನಂತಪುರ: ಕೋವಿಡ್‌ನಿಂದಾಗಿ ರಾಜ್ಯದ ಕೃಷಿ ವಲಯದಲ್ಲಿ 1771.05 ಕೋಟಿ ರೂಪಾಯಿಗಳ ನಷ್ಟವುಂಟಾಗಿದೆ ಯೆಂದು ಸಚಿವ ಪಿ. ಪ್ರಸಾದ್ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

ತೋಟಬೆಳೆಗಳ ಸಹಿತ ಕೃಷಿ ವಲಯದಲ್ಲಿ 1570.57 ಕೋಟಿ ರೂಪಾಯಿಗಳ ನಷ್ಟವುಂಟಾಗಿದೆ. ವೇತನ ರೂಪದಲ್ಲಿ 200.30 ಕೋಟಿ ರೂ.ಗಳ ನಷ್ಟ ಸಂಭವಿಸಿದೆ. ಕಾರ್ಮಿಕರ ಅಭಾವದಿಂದಾಗಿ ಏಲಕ್ಕಿ ಕೊಯ್ಲು ಯಥಾ ಸಮಯ ನಡೆಸಲಾಗಲಿಲ್ಲ. ಇದರಿಂದ 300 ಮೆಟ್ರಿಕ್ ಟನ್ ಏಲಕ್ಕಿ ನಷ್ಟಗೊಳ್ಳುವ ಸಾಧ್ಯತೆಯಿದೆ. 2019ರಲ್ಲಿ 2861 ಮೆಟ್ರಿಕ್ ಟನ್ ಏಲಕ್ಕಿ ವ್ಯಾಪಾರ ನಡೆದಿದೆ. 2020ಕ್ಕೆ ಅದು 588 ಟನ್‌ಗೆ ಇಳಿದಿದೆ. ಕೋವಿಡ್ ಸಂದಿಗ್ಧತೆಯಿಂದಾಗಿ ಕಾಳು ಮೆಣಸು ಬೆಲೆ ಕಿಲೋಕ್ಕೆ 330 ರೂಪಾಯಿಯಿಂದ 290 ರೂ.ಗೆ ಕುಸಿದಿದೆ. ಕಾಳು ಮೆಣಸು ಕೃಷಿಯಲ್ಲಿ 50 ಕೋಟಿ ರೂ.ಗಳ ನಷ್ಟವುಂಟಾಗಿದೆ.

ಭತ್ತ ಕೃಷಿ ವಲಯದಲ್ಲಿ 15ಕೋಟಿ ರೂಪಾಯಿ ನಷ್ಟವುಂಟಾಗಿದೆ. ತರಕಾರಿ ರಫ್ತು 40 ಶೇಕಡಾ ಕಡಿಮೆಯಾಗಿದೆ. ಬಾಳೆಕೃಷಿಗೆ 269 ಕೋಟಿ ರೂಪಾಯಿಗಳ ನಷ್ಟವುಂಟಾಗಿದೆ. ಅದೇ ರೀತಿ ಗೆಡ್ಡೆಗೆಣಸು ವಲಯದಲ್ಲಿ 20 ಕೋಟಿ ರೂ.ಗಳ ನಷ್ಟವುಂಟಾಗಿದೆಯೆಂದೂ ಸಚಿವ ತಿಳಿಸಿದ್ದಾರೆ.

ಸ್ಪೆಶಲ್ ಡೆಪ್ಯೂಟಿ ಕಲೆಕ್ಟರ್, ಎಲ್.ಎ.ಎನ್.ಎಚ್ ಕಾಂಪಿಟೆಂಟ್ ಅಥಾರಿಟಿ, ಅಣಂಗೂರು, ಕಾಸರಗೋಡು

ನಂಬ್ರ ಎಲ್.ಐ.ಸಿ123&134/ತೆಕ್ಕಿಲ್ ತಾರೀಕು: 11.10.2021

ಪತ್ರಿಕಾ ಪ್ರಕಟಣೆಗಾಗಿ

ಕಾಸರಗೋಡು ಜಿಲ್ಲೆಯಲ್ಲಿ ಕಾಸರಗೋಡು ತಾಲೂಕಿನ ತೆಕ್ಕಿಲ್ ಗ್ರಾಮದಲ್ಲಿ R.S.No. 265/1, 266/2, 267 (After Survey 265/8. 266/3. 267/5))ರಲ್ಲಿ ಸೇರಿದ (201+605)+(352+1425)+(282+681) ಸ್ಕೋಯರ್ ಮೀಟರ್ ಭೂಮಿಯೂ ಅದರೊಳಗಿರುವ ಕೃತಗಳು ಶ್ರೀಮತಿ ಕೆ.ಎಂ. ಫಾತಿಮತ್ತ್ ತಾಹಿರಾ W/o. Dr. ಕೆ.ಪಿ. ಅಲಿ, ಚಟ್ಟಂಚಾಲ್, ತೆಕ್ಕಿಲ್ ಎಂಬಿವರಿಂದ ನ್ಯಾಶನಲ್ ಹೈವೇಯ 66ರ ಅಭಿವೃದ್ಧಿಗಾಗಿ ಪಡೆದಿದ್ದು ನಷ್ಟಪರಿಹಾರವಾಗಿ 1,72,06,942/– ರೂಪಾಯಿಯೂ, 1,06,77,752/– ರೂಪಾಯಿ ನೀಡಲು ಆಜ್ಞೆಯಾಗಿದೆ.

ಮೇಲೆ ಹೇಳಿದ ಭೂಮಿಯ, ಉದುಮ ಸಬ್ ರಿಜಿಸ್ಟ್ರಾರ್ ಆಫೀಸಿನ 18.10.1985, 27.05.1986 ಎಂಬೀ ದಿನಾಂಕಗಳಲ್ಲಿ ರಿಜಿಸ್ಟರ್ ಮಾಡಿ 2397/1985, 1316/1986 ಎಂಬೀ ನಂಬ್ರ ಒರಿಜಿನಲ್ ಆಧಾರಗಳು ಹಿಂತಿರುಗಿ ಸಿಗದಂತೆ ನಷ್ಟಪಟ್ಟು ಹೋಗಿದ್ದಾಗಿ ಭೂಮಿ ಮಾಲಕ ತಿಳಿಸಿರುವ ಸಹಚರ್ಯೆಯಲ್ಲಿ ಈ ಪ್ರಮಾಣಗಳು ಸಾಕ್ಷ್ಯಪಡಿಸಿ ಕೋಪಿ ಸ್ವೀಕರಿಸಿ ಮೊತ್ತವನ್ನು ನೀಡಲು ಯಾರಿಗಾದರೂ ಆಕ್ಷೇಪ ಇದ್ದರೆ ಈ ಪ್ರಸಿದ್ಧೀಕರಣದ ನಂತರ 7 ದಿವಸದೊಳಗೆ ಕಾಸರಗೋಡು ಅಣಂಗೂರಿನಲ್ಲಿರುವ ಸ್ಪೆಷಲ್ ಡೆಪ್ಯೂಟಿ ಕಲೆಕ್ಟರ್ ಎಲ್.ಎ (ಎನ್.ಎಚ್) ಕಾಸರಗೋಡು & ಕೊಂಪಿಟೆಂಟ್ ಅಥಾರಿಟಿ ಸಮಕ್ಷಮ ದಾಖಲೆಗಳೊಂದಿಗೆ ತಿಳಿಸಬೇಕೆಂದು ಇದರೊಂದಿಗೆ ತಿಳಿಸುತ್ತೇವೆ.

ಇತೀ, ಸಹಿ/–
ಸ್ಪೆಶಲ್ ಡೆಪ್ಯೂಟಿ ಕಲೆಕ್ಟರ್
ಎಲ್.ಎ (ಎನ್.ಎಚ್) ಕಾಸರಗೋಡು.

ರೈಲುಗಳಲ್ಲಿ ಮಾಸ್ಕ್ ಇನ್ನೂ 6 ತಿಂಗಳು ಕಡ್ಡಾಯ

ಕಾಸರಗೋಡು: ಕೊರೊನಾ ವೈರಸ್ ಹರಡುವಿಕೆ ತಡೆಗಟ್ಟುವ ಉದ್ದೇಶದಿಂದ ಕಡ್ಡಾಯಗೊಳಿಸಿದ ಮಾಸ್ಕ್ ಧರಿಸುವಿಕೆಯ ಕಾಲಾವಧಿಯನ್ನು ರೈಲ್ವೇ ಇಲಾಖೆ ವಿಸ್ತರಿಸಿದೆ. ರೈಲು ಪ್ರಯಾಣಿಕರು ಹಾಗೂ ರೈಲ್ವೇ ನಿಲ್ದಾಣಗಳಿಗೆ ತಲುಪುವವರು ಇನ್ನು ಆರು ತಿಂಗಳು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕಾಗಿದೆ. ಈ ನಿಬಂಧನೆ 2022 ಎಪ್ರಿಲ್ 16ರ ವರೆಗೆ ಮುಂದುವರಿಯಲಿದೆಯೆಂದು ರೈಲ್ವೇ ತಿಳಿಸಿದೆ. ಮಾಸ್ಕ್ ಧರಿಸದಿದ್ದರೆ 500 ರೂಪಾಯಿ ದಂಡ ವಸೂಲು ಮಾಡಲಾಗುವುದಾಗಿ ತಿಳಿಸಲಾಗಿದೆ.

ರಾಜ್ಯದಲ್ಲಿ ಕೋವಿಡ್ ಹರಡಲು ಆರಂಭವಾದಾಗಿನಿಂದ ಜನರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕೆಂದು ಸರಕಾರ ಘೋಷಿಸಿದ್ದು ಅದೀಗಲೂ ಮುಂದುವರಿಯುತ್ತಿದೆ. ಇದೇ ವೇಳೆ ಮಾಸ್ಕ್ ಧರಿಸದ ಹಲವರಿಂದ ಈಗಾಗಲೇ ದಂಡ ವಸೂಲು ಮಾಡಲಾಗಿದೆ.

ಕೋವಿಡ್ ಸಾವು ಪ್ರಮಾಣಪತ್ರ ಮೊದಲ ದಿನ 184 ಅರ್ಜಿ

ತಿರುವನಂತಪುರ: ರಾಜ್ಯದಲ್ಲಿ ಕೋವಿಡ್ ಮರಣ ಪ್ರಮಾಣಪತ್ರಕ್ಕಾಗಿ ಅರ್ಜಿ ಸಲ್ಲಿಸಲಿರುವ ಮೊದಲ ದಿನವಾದ ನಿನ್ನೆ 184 ಅರ್ಜಿಗಳು ಲಭಿಸಿವೆ. ಕೋವಿಡ್ ಸಾವಿಗೆ ಸಂಬಂಧಿಸಿ ದೂರುಗಳವರೆಗೆ ನಿಗದಿತ ಮಂದಿಯ ಪ್ರಮಾಣಪತ್ರ ಲಭಿಸಲು ಅರ್ಜಿ ಕರೆಯಲಾಗಿದೆ. 30 ದಿನಗಳೊಳಗೆ ಆನ್‌ಲೈನ್ ಮೂಲಕವೇ ಅರ್ಜಿ ಮೇಲೆ ನಿರ್ಧಾರ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಇದುವರೆಗೆ 26,258 ಮಂದಿ ಕೋವಿಡ್‌ನಿಂದಾಗಿ ಮೃತಪಟ್ಟಿದ್ದಾರೆಂದು ಅಧಿಕೃತ ಲೆಕ್ಕಾಚಾರವಾಗಿದೆ. ದಾಖಲೆಗಳು ಇಲ್ಲ ದುದರಿಂದ 7000 ಮಂದಿಯ ಸಾವನ್ನು ಕೋವಿಡ್ ಮರಣ ಯಾದಿಯಲ್ಲಿ ಸೇರಿಸಲು ಬಾಕಿಯಿದೆಯೆಂದು ರಾಜ್ಯ ಆರೋಗ್ಯ ಸಚಿವೆ ವೀಣಾ ಜೋರ್ಜ್ ಇತ್ತೀಚೆಗೆ ತಿಳಿಸಿದ್ದರು.

ಪೆರ್ಲದಲ್ಲಿ ವಿ.ಹಿಂ.ಪ ಕಾರ್ಯಕರ್ತರ ಸಮಾವೇಶ

ಪೆರ್ಲ: ವಿಶ್ವಹಿಂದೂ ಪರಿಷತ್, ಭಜರಂಗದಳ, ಮಾತೃಶಕ್ತಿ, ದುರ್ಗಾವಾಹಿನಿ ಎಣ್ಮಕಜೆ ಪಂಚಾ ಯತ್ ವಿಶ್ವಹಿಂದೂ ಪರಿಷತ್ ಕಾರ್ಯಕರ್ತರ ಸಮಾವೇಶ ಪೆರ್ಲ ಶಂಕರ ಸದನದಲ್ಲಿ ನಡೆಯಿತು. ವಿ.ಹಿಂ.ಪ ಬದಿಯಡ್ಕ ಪ್ರಖಂಡ ಜತೆ ಕಾರ್ಯದರ್ಶಿ ರಾಜಾರಾಮ ಬಾಳಿಗ ಅಧ್ಯಕ್ಷತೆ ವಹಿಸಿದರು. ವಿ.ಹಿಂ.ಪ ಮಂಗಳೂರು ವಿಭಾಗ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಬೌದ್ಧಿಕ್ ನೀಡಿದರು. ಕಾಸರಗೋಡು ಅಧ್ಯಕ್ಷ ಜಯದೇವ ಖಂಡಿಗೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಂಕರನಾರಾಯಣ ಭಟ್ ಉಳುವಾನ, ಸಹ ಕಾರ್ಯದರ್ಶಿ ಸಂಕಪ್ಪ ಭಂಡಾರಿ ಬಳ್ಳಂಬೆಟ್ಟು, ಸೇವಾ ಪ್ರಮುಖ್ ಸುರೇಶ್ ಶೆಟ್ಟಿ ಪರಂಕಿಲ, ಬದಿಯಡ್ಕ ಪ್ರಖಂಡ ಅಧ್ಯಕ್ಷ ಹರಿಪ್ರಸಾದ್ ಪುತ್ರಕಳ, ಭಜರಂಗದಳ ಜಿಲ್ಲಾ ಸಂಚಾಲಕ ಶೈಲೇಶ್ ಅಂಜರೆ, ಉಕ್ಕಿನಡ್ಕ ಸಹ ಸ್ರಾಕ್ಷ ಆಯುರ್ವೇದ ವೈದ್ಯಶಾಲೆಯ ಡಾ। ಸ್ವಪ್ನಾ ಜೆ ಉಕ್ಕಿನಡ್ಕ ಉಪಸ್ಥಿತರಿದ್ದರು. ವಿಶ್ವಹಿಂದೂ ಪರಿಷತ್ ಎಣ್ಮಕಜೆ ಪಂಚಾಯತ್ ಸಮಿತಿ ಅಧ್ಯಕ್ಷರಾಗಿ ಡಾ। ಕೇಶವ ನಾಯ್ಕ್ ಖಂಡಿಗೆ, ಉಪಾಧ್ಯಕ್ಷರಾಗಿ ಅಶೋಕ್ ಪೆಲ್ತಾಜೆ, ಕಾರ್ಯದರ್ಶಿಯಾಗಿ ಸತೀಶ್ ಮೂಡಿತ್ತಾಯ, ಸಹಕಾರ್ಯದರ್ಶಿಯಾಗಿ ರವಿ ಪಾಲ್ತಿಮಾರ್, ಪ್ರಶಾಂತ್.ಟಿ, ಭಜರಂಗದಳ ಸಂಚಾಲಕ ಕೆ.ಸಿ. ಚಂದ್ರಶೇಖರನ್, ಸಹ ಸಂಚಾಲಕ ಚೇತನ್ ಸ್ವರ್ಗ, ಗೋರಕ್ಷಾ ಪ್ರಮುಖ್ ಸುನಿಲ್ ಉಕ್ಕಿನಡ್ಕ, ಸೇವಾ ಪ್ರಮುಖ್ ರಾಜೇಶ್ ಕಜಂಪಾಡಿ, ಸತ್ಸಂಗ ಪ್ರಮುಖ್ ಎ.ಕೆ. ಮಾಧವನ್ ನಂಬೂದಿರಿ, ಮಾತೃ ಶಕ್ತಿ ಸಂಯೋಜಕಿ ರಜನಿ ಸುರೇಶ್, ಸಹ ಸಂಚಾಲಕಿ ಲತಾ ಕುಮಾರಿ ಆಯ್ಕೆಯಾಗಿದ್ದಾರೆ. ರಾಜಾರಾಮ ಬಾಳಿಗ ಅಧ್ಯಕ್ಷತೆ ವಹಿಸಿದರು. ಭಜರಂಗದಳ ಬದಿಯಡ್ಕ ಪ್ರಖಂಡ ಸಹ ಸಂಚಾಲಕ ಪ್ರದೀಪ್ ಪೆರಿಯಾಲ್ ಸ್ವಾಗತಿಸಿ, ಪ್ರಶಾಂತ್ ಟಿ. ಪೆರ್ಲ ವಂದಿಸಿದರು.

ಕೇರಳ ಕಾಂಗ್ರೆಸ್ ಜನ್ಮದಿನಾಚರಣೆ

ಕಾಸರಗೋಡು: ಕೇರಳ ಕಾಂಗ್ರೆಸ್‌ನ 58ನೇ ಜನ್ಮದಿನವನ್ನು ಕಾಸರಗೋಡು ವಿಧಾನಸಭಾ ಸಮಿತಿ ವತಿಯಿಂದ ಆಚರಿಸಲಾಯಿತು. ನ್ಯಾಶನಲ್ ಅಬ್ದುಲ್ಲ ಉದ್ಘಾಟಿಸಿದರು. ಅಗಲಿದ ನೇತಾರರ ಸಂಸ್ಮರಣೆ ನಡೆಯಿತು.

ಮುಹಮ್ಮದ್ ಕೊಳಂಗರ ಅಧ್ಯಕ್ಷತೆ ವಹಿಸಿದರು. ಪಿ.ಎ. ಅಬ್ದುಲ್ ರಹ್‌ಮಾನ್, ಪ್ರವೀಣ್ ಕುಮಾರ್, ಸಿ.ಕೆ. ಮುನೀರ್, ಮಜೀದ್ ಉಪಸ್ಥಿತರಿದ್ದರು.

ರೈತರ ವಿರುದ್ಧ ಆಕ್ರಮಣ: ಉಪ್ಪಳದಲ್ಲಿ ಯುವ ಕಾಂಗ್ರೆಸ್ ಪ್ರತಿಭಟನೆ

ಉಪ್ಪಳ: ಉತ್ತರಪ್ರದೇಶದ ಲಖೀಂಪುರ್‌ನಲ್ಲಿ ನಡೆದ ರೈತರ ಹತ್ಯೆ, ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿಯ ಬಂಧನ ಖಂಡಿಸಿ ಉಪ್ಪಳ ಪೇಟೆಯಲ್ಲಿ ಭಾರತೀಯ ಯುವ ಕಾಂಗ್ರೆಸ್‌ನಿಂದ ಪಂಜಿನ ಮೆರವಣಿಗೆ ಪ್ರತಿಭಟನೆ ನಡೆಸಲಾಯಿತು. ಕುಂಬಳೆ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಲಕ್ಷ್ಮಣ ಪ್ರಭು ಮಾತನಾಡಿದರು. ಮಂಜೇಶ್ವರ ವಿಧಾನಸಭಾ ಮಂಡಲ ಯುವ ಕಾಂಗ್ರೆಸ್ ಅಧ್ಯಕ್ಷ ಇರ್ಷಾದ್ ಮಂಜೇಶ್ವರ ಅಧ್ಯಕ್ಷತೆ ವಹಿಸಿದ್ದರು. ಮನ್ಸೂರ್ ಮಂಗಲ್ಪಾಡಿ, ಮೊಹಮ್ಮದ್ ಹನೀಫ್, ಶರೀಫ್ ಆರಿಕ್ಕಾಡಿ, ಪೃಥ್ವಿರಾಜ್ ಶೆಟ್ಟಿ ಕುಂಬಳೆ, ಹುಸೇನ್ ಮಂಗಲ್ಪಾಡಿ, ಮನಾಫ್, ನವೀನ್, ಕಾರ್ತಿಕ್, ವರುಣ್, ಶಮದ್ ಭಾಗವಹಿಸಿದರು.

ವಿಶ್ವಹಿಂದೂ ಪರಿಷತ್ ಬೆಳ್ಳೂರು ಖಂಡ ಸಮಾವೇಶ

ಬೆಳ್ಳೂರು: ವಿಶ್ವಹಿಂದೂ ಪರಿಷತ್, ಭಜರಂಗದಳ ಮತ್ತು ಮಾತೃಶಕ್ತಿ ದುರ್ಗಾವಾಹಿನಿ ಬೆಳ್ಳೂರು ಪಂಚಾಯತ್ ಮಟ್ಟದ ಸಂಯುಕ್ತ ಸಮಾವೇಶ ಬೆಳ್ಳೂರು ಶ್ರೀ ಮಹಾವಿಷ್ಣು ಕ್ಷೇತ್ರದಲ್ಲಿ ನಡೆಯಿತು. ವಿ.ಹಿಂ.ಪ ಬದಿಯಡ್ಕ ಪ್ರಖಂಡ ಉಪಾಧ್ಯಕ್ಷ ಪ್ರದೀಪ್ ಕುಮಾರ್ ಬೆಳ್ಳೂರು ಅಧ್ಯಕ್ಷತೆ ವಹಿಸಿದರು. ವಿಎಚ್‌ಪಿ ಮಂಗಳೂರು ವಿಭಾಗ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಬೌದ್ಧಿಕ್ ನೀಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಉಳುವಾನ ಶಂಕರನಾರಾಯಣ ಭಟ್, ಜಿಲ್ಲಾ ಸಹ ಕಾರ್ಯದರ್ಶಿ ಸಂಕಪ್ಪ ಭಂಡಾರಿ, ಭಜರಂಗದಳ ಜಿಲ್ಲಾ ಸಂಚಾಲಕ ಶೈಲೇಶ್ ಅಂಜರೆ, ವಿಎಚ್‌ಪಿ ಬದಿಯಡ್ಕ ಪ್ರಖಂಡ ಅಧ್ಯಕ್ಷ ಹರಿಪ್ರಸಾದ್ ಪುತ್ರಕಳ, ಜಿಲ್ಲಾ ಸೇವಾ ಪ್ರಮುಖ್ ಸುರೇಶ್ ಶೆಟ್ಟಿ, ಸಂಸ್ಕೃತ ಭಾರತಿಯ ಮಂಜುನಾಥ ಉಡುಪ, ಬೆಳ್ಳೂರು ಶ್ರೀ ಮಹಾವಿಷ್ಣು ಕ್ಷೇತ್ರದ ಅಧ್ಯಕ್ಷ ಎ.ಬಿ. ಗಂಗಾಧರ ಬಲ್ಲಾಳ್, ಭಜರಂಗದಳ ಬದಿಯಡ್ಕ ಪ್ರಖಂಡ ಸಂಯೋಜಕರು ರಂಜಿತ್ ಕಿನ್ನಿಮಾಣಿ ಮಾರ್ಗದರ್ಶನ ನೀಡಿದರು. ಬೆಳ್ಳೂರು ಗ್ರಾಮ ಪಂಚಾಯತ್ ಅಧ್ಯಕ್ಷ ಶ್ರೀಧರ ಎಂ., ಸಂಘ ಪರಿವಾರದ ನೇತಾರರಾದ ಜಯಾನಂದ ಕುಳ, ಗಣೇಶ್ ಪ್ರಸಾದ್ ನಾಕೂರು, ಸುಂದರ ರಾಜ್ ರೈ ಮೊದಲಾದವರು ಭಾಗವಹಿಸಿದರು. ರಮೇಶ್ ಆಚಾರ್ಯ ನಾಟೆಕಲ್ಲು ಸ್ವಾಗತಿಸಿ, ಕೀರ್ತನ್ ಕಡೆಂಗ ವಂದಿಸಿದರು.

ನೂತನ ಸಮಿತಿಯನ್ನು ರೂಪೀಕರಿಸಲಾಯಿತು. ಗೌರವಾಧ್ಯಕ್ಷರಾಗಿ ಎ.ಬಿ. ಗಂಗಾಧರ ಬಲ್ಲಾಳ್, ಅಧ್ಯಕ್ಷರಾಗಿ ಪ್ರದೀಪ್ ಶೆಟ್ಟಿ ನೆಲ್ಲಿಪುಣಿ, ಉಪಾಧ್ಯಕ್ಷರಾಗಿ ಪ್ರಸಾದ್ ಗುಂಡಿಮನೆ, ಪ್ರಧಾನ ಕಾರ್ಯದರ್ಶಿಯಾಗಿ ಕಿಶೋರ್ ನಾಟೆಕಲ್ಲು, ಕಾರ್ಯದರ್ಶಿಯಾಗಿ ಯೋಗೀಶ್ ನಾಕೂರು, ಭಜರಂಗದಳ ಸಂಯೋಜಕರಾಗಿ ವಾಸುದೇವ ಶರ್ಮ, ಸಹ ಸಂಯೋಜಕರಾಗಿ ರೋಹಿತ್ ತೋಟದ ಮೂಲೆ, ಮಾತೃಶಕ್ತಿ ದಿವ್ಯಾ ಚಂದ್ರಶೇಖರ್ ನಾಯ್ಕ್, ಮುಕ್ಕುಡಂಗೊಳ್ಳಿ, ದುರ್ಗಾವಾಹಿನಿ– ಪ್ರಿಯ ಪ್ರದೀಪ್ ಮುಕ್ಕುಡಂಗೊಳ್ಳಿ, ಸತ್ಸಂಗ, ಅಭಿಲಾಷ್ ಮುಕ್ಕುಡಂಗೊಳ್ಳಿ, ಗೋರಕ್ಷಾ ಪ್ರಮುಖ್ ಕೀರ್ತನ್ ಕಡೆಂಗ, ಸೇವಾ ಪ್ರಮುಖ್ ರಾಜ ನಾಯ್ಕ್ ಪುಳಿತ್ತಡಿ, ಸುರಕ್ಷಾ ಪ್ರಮುಖ್ ಹರ್ಷರಾಜ್ ಹೊಸವಳಿಗೆ, ವಿದ್ಯಾರ್ಥಿ ಪ್ರಮುಖ್ ರಂಜಿತ್ ಎಂ.ಆರ್. ಎಂಬಿವರನ್ನು ಆರಿಸಲಾಯಿತು.

ಬ್ಲೋಕ್ ಪಂಚಾಯತ್ ಕಾರ್ಯಾಲಯ, ಮಂಜೇಶ್ವರ
ಫೋನ್: 04998–272916, 272673
ಪಿನ್ ಕೋಡ್: 671323
Email:bdo.manjeswar@gmail.com

ನಂ: A.2085/2019 ದಿನಾಂಕ: 07.10.2021

ಎಂಎಲ್‌ಎ ಅಭಿವೃದ್ಧಿ ಚಟುವಟಿಕೆಗಳಿಗೆ ಪೋಸ್ಟಲ್ ಟೆಂಡರ್ ಆಹ್ವಾನ

ಪೋಸ್ಟಲ್ ಟೆಂಡರ್ : 7 ಕಾಮಗಾರಿಗಳು
ಪೋಸ್ಟಲ್ ಟೆಂಡರ್‌ಫಾರ್ಮ್ ವಿತರಿಸುವ ದಿನಾಂಕ : 22.10.2021 ಮಧ್ಯಾಹ್ನ2ಗಂಟೆ ವರೆಗೆ
ಪೋಸ್ಟಲ್ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 29.10.2021ರಂದು
ಪೋಸ್ಟಲ್ ಟೆಂಡರ್ ತೆರೆಯುವ ದಿನಾಂಕ : 29.10.2021 ಅಪರಾಹ್ನ 3 ಗಂಟೆಗೆ

ಹೆಚ್ಚಿನ ಮಾಹಿತಿಗಳು ಕೆಲಸದ ದಿನದಂದು ಮಂಜೇಶ್ವರ ಬ್ಲೋಕ್ ಪಂಚಾಯತ್‌ನ ಕಚೇರಿಯಲ್ಲಿ ಅಸಿ. ಎಕ್ಸಿಕ್ಯೂಟಿವ್ ಇಂಜಿನಿಯರ್, ಎಲ್.ಎಸ್.ಜಿ.ಡಿ ಮಂಜೇಶ್ವರ ಕಚೇರಿಯಿಂದ, ಕೆಳಗೆ ತಿಳಿಸಿದ ವೆಬ್‌ಸೈಟ್‌ನಿಂದ ತಿಳಿಯಬಹುದಾಗಿದೆ.

www. tender.lsgdkerala.gov.in
Window No.B153799/2021

ಸಹಿ/.
ಬ್ಲೋಕ್ ಡೆವಲಪ್‌ಮೆಂಟ್
ಆಫೀಸರ್, ಮಂಜೇಶ್ವರ.

ಬ್ಲೋಕ್ ಪಂಚಾಯತ್ ಕಾರ್ಯಾಲಯ, ಮಂಜೇಶ್ವರ
ಫೋನ್: 04998–272916, 272673
ಪಿನ್ ಕೋಡ್: 671323
Email:bdo.manjeswar@gmail.com

ನಂ: ಎ.2082/2019 ದಿನಾಂಕ: 07.10.2021

2020–21 ಪ್ರಕೃತಿ ವಿಕೋಪ, ಮಳೆಗಾಲದ ನಾಶನಷ್ಟ ದುರಂತ ನಿವಾರಣಾ ಚಟುವಟಿಕೆಗಳಿಗೆ ಪೋಸ್ಟಲ್ ಟೆಂಡರ್ ಆಹ್ವಾನ

ಪೋಸ್ಟಲ್ ಟೆಂಡರ್ : 20 ಕಾಮಗಾರಿಗಳು
ಪೋಸ್ಟಲ್ ಟೆಂಡರ್‌ಫಾರ್ಮ್ ವಿತರಿಸುವ ದಿನಾಂಕ : 21.10.2021 ಮಧ್ಯಾಹ್ನ2ಗಂಟೆ ವರೆಗೆ
ಪೋಸ್ಟಲ್ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 28.10.2021ರಂದು
ಪೋಸ್ಟಲ್ ಟೆಂಡರ್ ತೆರೆಯುವ ದಿನಾಂಕ : 28.10.2021 ಅಪರಾಹ್ನ 3 ಗಂಟೆಗೆ

ಹೆಚ್ಚಿನ ಮಾಹಿತಿಗಳು ಕೆಲಸದ ದಿನದಂದು ಮಂಜೇಶ್ವರ ಬ್ಲೋಕ್ ಪಂಚಾಯತ್‌ನ ಕಚೇರಿಯಲ್ಲಿ ಅಸಿ. ಎಕ್ಸಿಕ್ಯೂಟಿವ್ ಇಂಜಿನಿಯರ್, ಎಲ್.ಎಸ್.ಜಿ.ಡಿ ಮಂಜೇಶ್ವರ ಕಚೇರಿಯಿಂದ ಕೆಳಗೆ ತಿಳಿಸಿದ ವೆಬ್‌ಸೈಟ್‌ನಿಂದ ತಿಳಿಯಬಹುದಾಗಿದೆ.

www. tender.lsgdkerala.gov.in
Window No.B153800/2021

ಸಹಿ/.
ಬ್ಲೋಕ್ ಡೆವಲಪ್‌ಮೆಂಟ್
ಆಫೀಸರ್, ಮಂಜೇಶ್ವರ.

ಶಶಿಕಲಾ ಟೀಚರ್‌ಗೆ ಗುರುನಮನ

ಕಾಸರಗೋಡು: ನುಳ್ಳಿಪ್ಪಾಡಿಯ ಸೀತಮ್ಮ ಪುರುಷ ನಾಯಕ ಸ್ಮಾರಕ ಕನ್ನಡ ಭವನದ ವಿಂಶತಿ ಉತ್ಸವದಂಗವಾಗಿ ನೃತ್ಯನಿಕೇತನ ಸ್ಥಾಪಕಿ, ನೃತ್ಯ ಕಲಾವಿದೆ, ನಿವೃತ್ತ ಅಧ್ಯಾಪಿಕೆ ಶಶಿಕಲಾ ಟೀಚರ್ ಅವರಿಗೆ ಗುರುನಮನ ನೆಲ್ಕಳ ಭಟ್ಸ್ ನಗರದ ಅವರ ಸ್ವ–ಗೃಹದಲ್ಲಿ ನಡೆಯಿತು.

ಕನ್ನಡ ಭವನದ ಸ್ಥಾಪಕ ವಾಮನ ರಾವ್ ಬೇಕಲ್, ಸಂಧ್ಯಾರಾಣಿ ಅವರು ಶಶಿಕಲಾ ಟೀಚರ್ ಅವರಿಗೆ ಶಾಲು ಹೊದಿಸಿ, ಸ್ಮರಣಿಕೆ, ಫಲಪುಷ್ಪ ನೀಡಿ ಸನ್ಮಾನಿಸಿ ಗೌರವಿಸಿದರು. ಹಿರಿಯ ಕವಿ, ಪತ್ರಕರ್ತ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಅರು ಶಶಿಕಲಾ ಟೀಚರ್‌ರ ಸಾಧನೆ, ಭರತನಾಟ್ಯ ಕಲಾ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆ ಕುರಿತಾಗಿ ಮಾತನಾಡಿದರು.

ಕನ್ನಡ ಪತ್ರಕರ್ತರ ಸಂಘದ ಅಧ್ಯಕ್ಷ ಎ.ಆರ್. ಸುಬ್ಬಯ್ಯಕಟ್ಟೆ, ಸತೀಶ್ ಕೂಡ್ಲು, ವಸಂತ ಕೆರೆಮನೆ, ಪತ್ರಕರ್ತರಾದ ಜಗನ್ನಾಥ, ಪ್ರದೀಪ್ ಬೇಕಲ್, ಟಿ. ಶಂಕರನಾರಾಯಣ ಭಟ್ ಮೊದಲಾದವರು ಉಪಸ್ಥಿತರಿದ್ದರು. ಸೀತಮ್ಮ ಪುರುಷನಾಯಕ ಸ್ಮಾರಕ ಕನ್ನಡ ಭವನದ ಸ್ಥಾಪಕ ವಾಮನ್ ರಾವ್ ಬೇಕಲ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯದರ್ಶಿ ಜಗದೀಶ್ ಕೂಡ್ಲು ವಂದಿಸಿದರು.

ಮುಸ್ಲಿಂಲೀಗ್ ಸಭೆ

ಕಾಸರಗೋಡು: ಮುಸ್ಲಿಂ ಲೀಗ್ ಪೋಷಕ ಸಂಘಟನೆಗಳ ಜಿಲ್ಲಾ ನೇತಾರರ ಸಭೆ ಈ ತಿಂಗಳ 14ರಂದು 2 ಗಂಟೆಗೆ ಕೊಲ್ಲಂಗಾನ ಸಭಾಂಗಣದಲ್ಲಿ ಜರಗಲಿದೆ. ಪಕ್ಷದ ನೇತಾರ ಶಾಸಕ ಪಿ.ಕೆ. ಕುಂಞಾಲಿಕುಟ್ಟಿ, ರಾಜ್ಯ ಕಾರ್ಯದರ್ಶಿ ಪಿ.ಎಂ.ಎ. ಸಲಾಂ, ಇತರರಾದ ಅಬ್ದುಲ್ ರಹ್‌ಮಾನ್ ರಂಡತ್ತಾಣಿ ಹಾಗೂ ಇತರರು ಭಾಗವಹಿಸಿದರು.

ಅರ್ಜಿ ಆಹ್ವಾನ

ಕಾಸರಗೋಡು: ಹೊಸದುರ್ಗ ಫಾಸ್ಟ್ ಟ್ರಾಕ್ ಸ್ಪೆಷಲ್ ನ್ಯಾಯಾಲಯದಲ್ಲಿ ಹುದ್ದೆಗಳು ಬರಿದಾಗಿದ್ದು, ನೇಮಕಾತಿ ಸಂಬಂಧ ವಿವಿಧ ಹುದ್ದೆಗಳಿಂದ ನಿವೃತ್ತರಾದ ನ್ಯಾಯಾಲಯ ಸಿಬ್ಬಂದಿಗಳಿಂದ ಅರ್ಜಿ ಕೋರಲಾಗಿದೆ.

ಕಂಪ್ಯೂಟರ್ ಅಸಿಸ್ಟೆಂಟ್/ ಎಲ್‌ಡಿ ಟೈಪಿಸ್ಟ್ (ಒಂದು ಹುದ್ದೆ), ಆಫೀಸ್ ಅಸಿಸ್ಟೆಂಟ್ (ಎರಡು ಹುದ್ದೆಗಳು) ಹುದ್ದೆಗಳಿಗೆ ಪಿಎಸ್‌ಸಿ ತಿಳಿಸುವ ಅರ್ಹತೆ ಮತ್ತು 5 ವರ್ಷಗಳ ವೃತ್ತಿ ಅನುಭವ ಹೊಂದಿರುವವರಿಂದ ಅರ್ಜಿ ಕೋರಲಾಗಿದೆ. ಅರ್ಹರು ಅ. 18ರ ಮುಂಚಿತವಾಗಿ ವಯೋಮಾನ, ಅರ್ಹತೆ ಖಚಿತಪಡಿಸುವ ದಾಖಲೆ ಪತ್ರಗಳ ಸ್ವಯಂ ದೃಢೀಕರಿಸಿದ ನಕಲುಗಳನ್ನು ಜಿಲ್ಲಾ ಜಡ್ಜ್, ಜಿಲ್ಲಾ ನ್ಯಾಯಾಲಯ, ಕಾಸರಗೋಡು– 671123 ಎಂಬ ವಿಳಾಸಕ್ಕೆ ನೇರವಾಗಿ ಯಾ ಅಂಚೆ ಮುಖಾಂತರ ಸಲ್ಲಿಸಬೇಕು. ಲಕೋಟೆಯ ಹೊರಗಡೆ ತಾತ್ಕಾಲಿಕ ಹುದ್ದೆಗಿರುವ ಅರ್ಜಿ ಎಂದು ನಮೂದಿಸಬೇಕು.

ಮುಜುಂಗಾವು ಕ್ಷೇತ್ರ ಪರಿಸರ ಶುಚೀಕರಣ

ಸೀತಾಂಗೋಳಿ: ಶ್ರೀ ವೀರಮಾರುತಿ ವ್ಯಾಯಾಮ ಸಂಘ ದರ್ಬಾರ್ ಕಟ್ಟೆ ಇದರ ವತಿಯಿಂದ ಮುಜುಂಗಾವು ಶ್ರೀ ಪಾರ್ಥಸಾರಥಿ ದೇವಸ್ಥಾನದ ಪರಿಸರ ಹಾಗೂ ರಸ್ತೆಯನ್ನು ಶ್ರಮದಾನ ಮೂಲಕ ಶುಚಿಗೊಳಿಸಲಾಯಿತು. ಬಳಿಕ ನಡೆದ ತಿಂಗಳ ಸಭೆಯಲ್ಲಿ ಈ ತಿಂಗಳ 17ರಂದು ನಡೆಯುವ ತುಲಾ ಸಂಕ್ರಮಣ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ನಿರ್ಧರಿಸಲಾಯಿತು. ಸಂಘದ ಅಧ್ಯಕ್ಷ ಗಣೇಶ್ ಎಸ್, ಶಿವಾನಂದ ಡಿ, ಮನೋಜ್ ಕುಮಾರ್ ಕೆ.ಕೆ, ಲಕ್ಷ್ಮಣ ಎಂ, ಬಾಬು ಐ, ಸುರೇಶ್ ಎಂ, ಶಂದೋಸ್ ಕುಮಾರ್ ಕೆ.ಕೆ. ಮೊದಲಾದವರು ಉಪಸ್ಥಿತರಿದ್ದರು.